ಅವರಿಲ್ಲಿದ್ದರೂ ಅವರ ಸೆಳೆತಗಳು, ಸಂವೇದನೆಗಳು ಊರಿನಲ್ಲಿರುತ್ತೆ. ಅವುಗಳನ್ನು ತೋರುವಂಥ ರೀತಿಯ ಪಾತ್ರ ಅವರದ್ದು. ಮತ್ತೊಂದು ಪಾತ್ರದಲ್ಲಿ ನಟ ಗಣೇಶ್ ಅವರ ಮಗ ವಿಹಾನ್ ಇದ್ದಾರೆ. ಈ ಪಾತ್ರಕ್ಕಾಗಿ ಎಂಟ್ಹತ್ತು ವರ್ಷದ ಮಕ್ಕಳನ್ನು ಆಡಿಷನ್ ಮಾಡಿದ್ದೆ. ಆದರೆ ಮಕ್ಕಳು ಓವರ್ ಪ್ರಿಪೇರ್ಡ್ ಆಗಿದ್ದಾರೆ ಅನ್ನಿಸಿತು. ಆ ವಯಸ್ಸಿನಲ್ಲಿರಬೇಕಾದ ಸಹಜ ಮುಗ್ಧತೆ ಸಿಗುತ್ತಿರಲಿಲ್ಲ. ವಿಹಾನ್ ಆ ಪಾತ್ರಕ್ಕೆ ಉತ್ತಮ ಆಯ್ಕೆ ಅನಿಸಿತು. ಕಥೆ ಕೇಳಿದ ಮೇಲೆ ಗಣೇಶ್ ಸರ್ ತುಂಬಾ ಇಷ್ಟಪಟ್ಟು ಮಗನನ್ನು ಕಳಿಸಿಕೊಟ್ಟರು. ಇತರೆ ಪಾತ್ರಗಳ ಬಗ್ಗೆ ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ.

◆ **ಇಳಯರಾಜ ಅವರ ಸಂಗೀತ ನಿಮ್ಮ ಚೊಚ್ಚಿಲ ಸಿನಿಮಾಗೆ ಸಿಕ್ಕಿದೆ. ಇದು ಸಾಧ್ಯವಾದ ಬಗೆ ಹೇಗೆ?**

ಇದು ಕಥೆಯೇ ಪಡೆದುಕೊಂಡ ಶಕ್ತಿ. ಇಳಯರಾಜ ಅವರಿಂದ ಆಶೀರ್ವಾದ ಪಡೆದು ಬರೋಣ ಎಂದು ಹೋಗಿದ್ದು. ಕಥೆ ಕೇಳಿ ಅವರು ತುಂಬಾ ಇಷ್ಟಪಟ್ಟು ಸಂಗೀತ ಮಾಡ್ತೀನಿ ಎಂದು ನನಗೆ ಬೆಂಬಲವಾದರು.

◆ **ಈ ಸಿನಿಮಾದಿಂದ ಜನ ಏನನ್ನು ನಿರೀಕ್ಷಿಸಬಹುದು? ಬಿಡುಗಡೆ ಯಾವಾಗ?**

ತುಂಬಾ ಮನರಂಜನೆಯಿದೆ. ಕೌಟುಂಬಿಕ ಮೌಲ್ಯಗಳ ಬಗ್ಗೆ ಖಂಡಿತ ಆಲೋಚನೆಗೆ ಹಚ್ಚುತ್ತದೆ. ಎಲ್ಲರ ಜೀವನದಲ್ಲಿಯೂ, ಎಲ್ಲರ ಮನೆಯಲ್ಲಿಯೂ ಇರುವ ಸಂಗತಿ ಎನ್ನಬಹುದು. ಸಿನಿಮಾದಿಂದ ನೋಡುಗನಲ್ಲಿ ಒಂದು ಹೊಸದಾದ ದೃಷ್ಟಿಕೋನ ಹುಟ್ಟುತ್ತದೆ ಎಂದು ಬಲವಾಗಿ ನಂಬಿದ್ದೇನೆ.

ಸಿನಿಮಾ ಬಿಡುಗಡೆಗೆ ಎರಡು ಮೂರು ತಿಂಗಳು ಆಗಬಹುದು. ಒಳ್ಳೆಯ ಡೇಟ್, ಪ್ರೊಮೋಷನ್‌ಗಳನ್ನು ಮಾಡಿ ಸಿನಿಮಾ ಬಿಡುಗಡೆ ಮಾಡುತ್ತೇವೆ.

◆ **ಯಾವ ರೀತಿ ಕಥೆಗಳನ್ನು, ಸಿನಿಮಾಗಳನ್ನು ನೀಡಬೇಕೆಂದುಕೊಂಡಿದ್ದೀರಿ?**

ಮುಖ್ಯವಾಗಿ ಒಂದಷ್ಟು ಕನ್ನಡದ ನೋಡುಗರನ್ನು, ಪ್ರೇಕ್ಷಕ ಸಮುದಾಯವನ್ನು ಕಟ್ಟಬೇಕು ಎಂದಿದೆ. ಇದಕ್ಕೂ ಮೊದಲು ನಾವು ಯಾರಿಗೆ ಕಥೆ ಹೇಳುತ್ತಿದ್ದೇವೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಿದೆ. ಇವತ್ತಿನ ಮಟ್ಟಿಗೆ ಹೊಸಬರಿಗಂತೂ ಯಾರೂ ಕಾಣುತ್ತಿಲ್ಲ. ಜನ ಎಲ್ಲಿದ್ದಾರೆ, ನನ್ನ ಕಥೆ ಕೇಳುವವರು ಯಾರಿದ್ದಾರೆ ಅನ್ನಿಸಿಬಿಡುತ್ತೆ. ನಮಗೇ ಗೊತ್ತಾಗಲ್ಲ, ನಾವು ಯಾರಿಗೆ ಕಥೆ ಹೇಳುತ್ತಿದ್ದೇವೆ ಎಂದು. ಈ ಸಿನಿಮಾ ಮೂಲಕ ಪ್ರೇಕ್ಷಕ ಸಮುದಾಯ ದೊರೆತರೆ, ಅವರಿಗೆ ಏನು ಬೇಕು ಎಂದು ತಿಳಿಯುತ್ತದೆ.

ನನಗೆ ಇದೇ ರೀತಿಯ ಸಿನಿಮಾ ಮಾಡಬೇಕು ಎಂದಿಲ್ಲ. ಇದು ತುಂಬಾ ದುಬಾರಿ ಕಲೆ. ತುಂಬಾ ಹಣ ಖರ್ಚಾಗುತ್ತೆ. ಬರೀ ಆಸೆ ಇಟ್ಟುಕೊಂಡು ಸಾಧ್ಯವಾಗುವ ಮಾತಲ್ಲ. ಜನರ ಬೆಂಬಲ ಸಿಕ್ಕಾಗ, ಅವರ ಅಭಿರುಚಿಗೆ ತಕ್ಕ ಹಾಗೆ ನಾವೂ ಕಲಿತು ನಮ್ಮ ಅಭಿರುಚಿ ಸೇರಿಸಿ ಸಿನಿಮಾ ಮಾಡಬೇಕು ಎಂದಿದೆ.

◆ **ಸಿನಿಮಾರಂಗದಲ್ಲಿ ತಾಂತ್ರಿಕವಾಗಿ, ಬರವಣಿಗೆಯಲ್ಲಿ ಮಹಿಳೆಯರ ಪ್ರಮಾಣ ಕಡಿಮೆ. ಇದನ್ನು ಹೆಚ್ಚಿಸುವ ದಾರಿ ಯಾವುದು?**

ಸಿನಿಮಾರಂಗದಲ್ಲಿ ಹೆಣ್ಣುಮಕ್ಕಳು ನಟನೆಗೆ, ಗ್ಲಾಮರ್‌ಗಷ್ಟೇ ಸೀಮಿತವಾಗದೆ ಬರವಣಿಗೆಗೆ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಹೊಸ ಥರದ ಕಥೆಗಳನ್ನು ನೋಡಲು ಸಾಧ್ಯ. ಬರವಣಿಗೆ, ನಿರ್ದೇಶನ, ತಾಂತ್ರಿಕತೆಯಲ್ಲಿ ತೊಡಗಿಕೊಳ್ಳುವುದರಿಂದ ದೊಡ್ಡ ಜಗತ್ತಿಗೆ ನಾವು ತೆರೆದುಕೊಳ್ಳುತ್ತೇವೆ. ■



# ರಾಧಿಕಾ ನಿರೀಕ್ಷೆಯಲ್ಲಿ...

**2024**ರಲ್ಲಿ ಬಿಡುಗಡೆಯಾದ 'ಭೈರಾದೇವಿ' ನಂತರ ಸಿನಿಮಾಗಳಿಂದ ಸ್ವಲ್ಪ ಗ್ಯಾಪ್ ತೆಗೆದುಕೊಂಡಂತಿದ್ದ ನಟಿ ರಾಧಿಕಾ ಕುಮಾರಸ್ವಾಮಿ, ಈ ವರ್ಷ ಹಲವು ಸಿನಿಮಾಗಳಲ್ಲಿ ತೊಡಗಿಕೊಳ್ಳುವ ತಯಾರಿಯಲ್ಲಿದ್ದಾರೆ. ಅತ್ಯುತ್ತಮ ಪಾತ್ರಗಳು ಹಾಗೂ ಸುಂದರ ನಿರೂಪಣೆ ಹೊಂದಿರುವ ಪ್ರಾಜೆಕ್ಟ್‌ಗಳತ್ತ ಗಮನಹರಿಸಿರುವುದಾಗಿ ತಿಳಿಸಿದ್ದಾರೆ.

ರಾಧಿಕಾ ನಟನೆಯ ಬಹುನಿರೀಕ್ಷಿತ 'ಅಜಾಗ್ರತ' ಸಿನಿಮಾ ಕೂಡ ಬಿಡುಗಡೆಗೆ ಸಿದ್ಧವಾಗಿದೆ. ಇದೇ ಸಂದರ್ಭದಲ್ಲಿ ತಮಿಳು, ತೆಲುಗು ಸಿನಿಮಾಗಳಲ್ಲಿ ನಟಿಸಿ ಮೆಚ್ಚುಗೆ ಪಡೆದಿರುವ ರಾಧಿಕಾ, ಮಲಯಾಳಂ ಸಿನಿಮಾದಲ್ಲಿ ತೊಡಗಿಕೊಳ್ಳುವ ಸುಳಿವು ನೀಡಿದ್ದಾರೆ.

ಕಮರ್ಷಿಯಲ್ ಜೊತೆಜೊತೆಗೆ ಪಾತ್ರಪ್ರಧಾನ ಸಿನಿಮಾಗಳನ್ನು ಬ್ಯಾಲೆನ್ಸ್ ಮಾಡುತ್ತಾ ಉತ್ತಮ ಫಿಲ್ಮೋಗ್ರಫಿ ಹೊಂದಿರುವ ರಾಧಿಕಾ, ಮಲಯಾಳಂ ಸಿನಿಮಾದತ್ತ ಹೊರಳುತ್ತಿದ್ದಾರೆ. ಮಲಯಾಳಂ ಸಿನಿಮಾರಂಗದಿಂದ ಅವರಿಗೆ ಅವಕಾಶ ಬಂದಿರುವುದಾಗಿ ತಿಳಿದುಬಂದಿದೆ.

'ನನಗೆ ಮಲಯಾಳಂ ಸಿನಿಮಾ ಪ್ರಾಜೆಕ್ಟ್‌ವೊಂದರ ಅವಕಾಶ ಬಂದಿದೆ. ಕಥೆ ಬಹಳ ಇಷ್ಟವಾಗಿದೆ. ಡೇಟ್‌ಗಳನ್ನು ನೋಡಿಕೊಳ್ಳುತ್ತಿದ್ದೇನೆ. ಎಲ್ಲ ಸರಿಯಾಗಿ ಕೂಡಿಬಂದರೆ ಸಿನಿಮಾಗೆ ಸಹಿ ಹಾಕುತ್ತೇನೆ' ಎಂದು ತಿಳಿಸಿದ್ದಾರೆ.

ಸಿನಿಮಾಗಳ ವಿಷಯದಲ್ಲಿ ತಮ್ಮ ಆಯ್ಕೆ ಇನ್ನಷ್ಟು ಹರಿತವಾಗಿರುವುದಾಗಿ ತಿಳಿಸಿರುವ ಅವರು, 'ಆಸಕ್ತಿಕರ ಸ್ಕ್ರಿಪ್ಟ್‌ಗಳನ್ನು ಕೇಳುತ್ತಿರುವುದಕ್ಕೆ ಖುಷಿಯಿದೆ. ಮಲಯಾಳಂ ಸಿನಿಮಾ ಅವಕಾಶವೂ ಬಂದಿದೆ. ಈ ವರ್ಷ ಎರಡು ಪ್ರಾಜೆಕ್ಟ್‌ಗಳನ್ನಾದರೂ ತೆಗೆದುಕೊಳ್ಳಬೇಕೆಂದುಕೊಂಡಿದ್ದೇನೆ' ಎಂದಿದ್ದಾರೆ.

ಬಿಡುಗಡೆಗೆ ಸಿದ್ಧವಾಗಿರುವ ರಾಧಿಕಾ ಕುಮಾರಸ್ವಾಮಿ ಅವರ 'ಅಜಾಗ್ರತ' ಸಿನಿಮಾವನ್ನು ಎಂ. ಶಶಿಧರ್ ನಿರ್ದೇಶಿಸಿದ್ದು, ಶ್ರೇಯಸ್ ತಲ್ಪಾಡೆ, ಸುನಿಲ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ■

ನಿರ್ದೇಶಕ ಶಶಾಂಕ್ ಸೋಗಲ್ ಕೂಡ ಈ ಪ್ರಾಜೆಕ್ಟ್‌ಗೆ ಜೊತೆಯಾಗಿದ್ದಾರೆ. 'ಆರ್ಕೆಸ್ಟ್ರಾ ಮೈಸೂರು', 'ಬಡವ ರಾಸ್ಕಲ್', 'ಮರ್ಯಾದೆ ಪ್ರಶ್ನೆ', 'ಎಕ್ಕ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿರುವ ಪೂರ್ಣಚಂದ್ರ ಮೈಸೂರು ಸದ್ಯ ತಾವು ನಟಿಸಿರುವ 'ಹೆಗ್ಗಣ ಮುದ್ದು' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಇದರ ಜೊತೆಗೆ ಸದ್ದಿಲ್ಲದೇ 'ಮದರ್ ಪ್ರಾಮಿಸ್' ಸಿನಿಮಾವನ್ನು ನಿರ್ದೇಶಿಸಿದ್ದಾರೆ.

'ನನಗೆ ಕ್ರೈಮ್ ಥ್ರಿಲ್ಲರ್ ಹಾಸ್ಯಪ್ರಧಾನ ಕಥೆಗಳನ್ನು ಬರೆಯುವ ಆಸೆ ಇತ್ತು. ಸವಾಲಾಗಿ ಸ್ವೀಕರಿಸಿ ಕಥೆ ಬರೆದೆ. ಕಥೆಯನ್ನು ಓದಲು ಧನಂಜಯ ಅವರಿಗೆ ನೀಡಿದ್ದೆ. ಅವರು ಆರು ತಿಂಗಳು ಸಮಯ ತೆಗೆದುಕೊಂಡರು. ಕಥೆ ಓದಿದ ಕೂಡಲೇ ನಿರ್ಮಾಣಕ್ಕೆ, ನಟನೆಗೆ ಒಪ್ಪಿಕೊಂಡರು' ಎಂದು ಹೇಳಿದ್ದಾರೆ.

ಜೆನ್ ಜಿ ಆಧರಿತ ಗ್ಯಾಂಗ್‌ಸ್ಟರ್ ಕಾಮಿಡಿ ಜಾನರ್ ಸಿನಿಮಾ ಇದಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ■

